2. ತಖೆಓಡಿಯಲಾದ ಪ್ರಶ್ನೋತ್ತರಗಳು.

ಪ್ರಶ್ನೆ ಸಂಖ್ಯೆ 194(1972)

ಅಧ್ಯಕ್ಷರು: ಮಾನ್ಯ ಸದಸ್ಯರ ಪ್ರಶ್ನೆ ಬೇರೆ ಇಲಾಖೆಗೆ ವರ್ಗಾವಣೆಯಾಗಿದೆ. ಇದನ್ನು ನಾಳೆ ಅಥವಾ ನಾಡಿದ್ದು ತೆಗೆದುಕೊಳ್ಳೋಣ.

ಪ್ರಶ್ನೆ ಸಂಖ್ಯೆ 195(2129)

ಅಧ್ಯಕ್ಷರು: ತಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ. ನಾಳೆ ಅಥವಾ ನಾಡಿದ್ದು ಇದಕ್ಕೆ ಉತ್ತರ ಕೊಡಿಸೋಣ.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಇನ್ನೂ ಸದನಕ್ಕೆ ಬಂದಿಲ್ಲ. ಅವರು ಇಷ್ಟರಲ್ಲೇ ಬರುವವರಿದ್ದಾರೆ. ಅವರು ಬಂದ ಮೇಲೆ ತಮ್ಮ ಪ್ರಶ್ನೆಯನ್ನು ಕೇಳಿ.

ಹಾಸನ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆಗಳನ್ನು ದುರಸ್ತಿಗೊಳಿಸಲು ಅನುದಾನ.

216(2571)

ಶ್ರೀ ಶಿವರಾಮು ಬಿ. (ಗಂಡಸಿ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ಸಣ್ಣ ನೀರಾವರಿ ಇಲಾಖೆ ಜಿಲ್ಲಾ ಪಂಚಾಯತಿ ಮತಿಯಿಂದ ಅನುಷ್ಠಾನಗೊಳಿಸಿರುವ ಗಂಗಾ ಕಲ್ಯಾಣ ಯೋಜನೆಗಳನ್ನು ದುರಸ್ತಿಪಡಿಸಲು ಮತ್ತು ಅನುಷ್ಠಾನಗೊಳಿಸದ ಯೋಜನೆಗಳನ್ನು ಕೈಗೊಳ್ಳಲು ಹಾಸನ ಜಿಲ್ಲೆಗೆ ಅಗತ್ಯವಾದ ಅನುದಾನವನ್ನು ಸರ್ಕಾರ ಒದಗಿಸಿದೆಯೇ?

ಆ) ಒದಗಿಸದಿದ್ದಲ್ಲಿ ಅವುಗಳ ಬಗ್ಗೆ ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ ಮತ್ತು ಆ) ಸಣ್ಣ ನೀರಾವರಿ ಇಲಾಖೆಯಿಂದ ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಕಳೆದ 3 ವರ್ಷಗಳಿಂದ ಯಾವುದೇ ಗಂಗಾ ಕಲ್ಯಾಣ ಯೋಜನೆಗಳನ್ನು ಅನುಷ್ಠಾನ ಅಥವಾ ದುರಸ್ತಿಗೊಳಿಸಿರುವುದಿಲ್ಲ ಹಾಗೂ ಸದರಿ ಯೋಜನೆಗಳಿಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಯಾವುದೇ ಅನುದಾನ ಒದಗಿಸಿರುವುದಿಲ್ಲ.

ಶ್ರೀ ಜಿ.ಶಿವರಾಮು: ಮಾನ್ಯ ಅಧ್ಯಕ್ಷರೇ ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ನಾನು ಈ ಪ್ರಶ್ನೆಯನ್ನು ಸಮಾಜ ಕಲ್ಯಾಣ ಇಲಾಖೆ ಸಚಿವರಿಗೆ ಕೇಳಿದ್ದೆ. ಆದರೆ, ಅದನ್ನು ಸಣ್ಣ ನೀರಾವರಿ ಇಲಾಖೆಗೆ ವರ್ಗಾವಣೆ ಮಾಡಿದ್ದಾರೆ. ನಾನು ಈ ಪ್ರಶ್ನೆಯನ್ನು ಕೇಳಿದ್ದರ ಉದ್ದೇಶ ಇಷ್ಟೇ, ಪ್ರಾರಂಭದಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು ಜಿಲ್ಲಾ ಪಂಚಾಯಿತಿಯ ಸಣ್ಣ ನೀರಾವರಿ ಇಲಾಖೆ ಮೂಲಕ ಅನುಷ್ಠಾನಗೊಳಿಸಲಾಗುತ್ತಿತ್ತು. ಆನಂತರ ಈ ಯೋಜನೆಯ ಅನುಷ್ಠಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ನಿಗಮಕ್ಕೆ ವರ್ಗಾವಣೆ ಮಾಡಲಾಯಿತು. ಆ ರೀತಿ ವರ್ಗಾವಣೆ ಮಾಡತಕ್ಕಂಥ ಸಂದರ್ಭದಲ್ಲಿ ಅನುದಾನವನ್ನು ಒದಗಿಸಿ ಅಪೂರ್ಣಗೊಂಡಂತಹ ಕಾಮಗಾರಿಗಳ ಬಗ್ಗೆ ಯಾವುದೇ ಕ್ರಮವನ್ನೂ ಕೂಡ ತೆಗೆದುಕೊಳ್ಳದೆ ಮತ್ತು ಪೂರ್ಣಗೊಂಡಿದ್ದಂತಹ ಕಾಮಗಾರಿಗಳನ್ನು ನಿರ್ವಹಣೆ ಮಾಡದೆ, ಅದಕ್ಕೆ ಅನುದಾನವನ್ನೂ ಕೂಡ ಒದಗಿಸದೆ, ಅಲ್ಲಿಗೇ ಅದನ್ನು ಕೈಬಿಟ್ಟು ಮುಂದಿನ ವರ್ಷದ ಯೋಜನೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನಿಗಮದ ಮೂಲಕ ಅನುಷ್ಠಾನಗೊಳಿಸತಕ್ಕದ್ದನ್ನು ಮುಂದುವರೆಸಲಾಯಿತು. ಹೋದ ಸಲವೂ ಕೂಡ ನಾನು ಇದೇ ಪ್ರಶ್ನೆಯನ್ನು ಸಮಾಜ ಕಲ್ಯಾಣ ಇಲಾಖೆ ಸಚಿವರಿಗೆ ಕೇಳಿದಾಗ ಅವರು ಅಪೂರ್ಣಗೊಂಡಿರತಕ್ಕಂಥ ಕಾಮಗಾರಿಗಳ ಬಗ್ಗೆ ಮತ್ತು ಪೂರ್ಣಗೊಂಡಿರತಕ್ಕಂಥ ಕಾಮಗಾರಿಗಳ ನಿರ್ವಹಣೆಯ ಬಗ್ಗೆ ಪೂರ್ಣ ಮಾಹಿತಿಯನ್ನು ತರಿಸಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಜೊತೆಗೆ ಚರ್ಚೆಯನ್ನು ಮಾಡಿ, ಅದಕ್ಕೆ ಬೇಕಾಗಿರತಕ್ಕ ಅನುದಾನವನ್ನು ಮಂಜೂರು ಮಾಡಿಸತಕ್ಕಂಥ ಆಶ್ವಾಸನೆಯನ್ನು ಕೊಟ್ಟರೂ ಕೂಡ ಇಲ್ಲಿಯವರೆಗೆ ಇದರ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ಇರುವುದರಿಂದ ನಾನು ಈ ಪ್ರಶ್ನೆಯನ್ನು ಮತ್ತೊಮ್ಮೆ ಕೇಳಬೇಕಾಗಿ ಬಂದಿದೆ. ಇದು ಸಣ್ಣ ನೀರಾವರಿ ಇಲಾಖೆಗೆ ಹೇಗೆ ವರ್ಗಾವಣೆ ಆಯಿತು ಎಂಬುದು ನನ್ನ ಮೂಲಭೂತವಾದ ಪ್ರಶ್ನೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಸನ್ಮಾನ್ಯ ಶಿವರಾಮ್‌ರವರು ಅವರೇ ಹೇಳಿದ ಹಾಗೆ ಈ ಒಂದು ಕಾರ್ಯಕ್ರಮ ಸಣ್ಣ ನೀರಾವರಿ ಇಲಾಖೆಗೆ ಬರುವುದಿಲ್ಲ, ಇದು ಸಮಾಜ ಕಲ್ಯಾಣ ಇಲಾಖೆಗೆ ಬರತಕ್ಕಂಥದ್ದು ಎಂದು ಹೇಳಿದ್ದಾರೆ. ಸಣ್ಣ ನೀರಾವರಿ ಇಲಾಖೆಯಲ್ಲಿ ಯಾವುದೇ ತರಹದ ಗಂಗಾ ಕಲ್ಯಾಣ ಎನ್ನುವ ಕಾರ್ಯಕ್ರಮ ನಾವು ತೆಗೆದುಕೊಳ್ಳುತ್ತಿಲ್ಲ. ಆದರೆ ಎಸ್‌ಸಿ ಎಸ್‌ಟಿ ಕಾರ್ಪೊರೇಷನ್‌ನಿಂದ ಯಾವುದಾದರೂ ಸೂಕ್ತವಾದ ಕಾರ್ಯಕ್ರಮ ಅಲ್ಲಿ ಅನುಷ್ಠಾನ ಮಾಡಬೇಕು ಇರುವ ಸಂದರ್ಭದಲ್ಲಿ ಎಸ್‌ಸಿ ಎಸ್‌ಟಿ ವರ್ಗಗಳಿಗೆ ಮೀಸಲಿಟ್ಟ ಹಣ ನಮ್ಮ ಇಲಾಖೆಯಲ್ಲಿ ಮೂರು ಕೋಟಿ ರೂಪಾಯಿ ಇರುವುದರಿಂದ ಎಸ್‌ಸಿ ಎಸ್‌ಟಿ ವರ್ಗದ ಜನರ ಸಂಬಂಧವಾಗಿ ಕೆಲವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಡುತ್ತೇನೆ. ಅದರ ಪ್ರಕಾರವಾಗಿ ಎಸ್‌ಸಿ ಎಸ್‌ಟಿ ಕಾರ್ಪೊರೇಷನ್‌ರವರು ಕೆಲವು ಕಾರ್ಯಕ್ರಮಗಳನ್ನು ಕಳುಹಿಸಿ ಕೊಟ್ಟಿದ್ದಾರೆ. ಆ ಪ್ರಕಾರ ನಾವು ಕ್ರಮ

ತೆಗದುಕೊಳ್ಳುತ್ತೇವೆ. ಗಂಗಾ ಕಲ್ಯಾಣ ಕಾರ್ಯಕ್ರಮ ನಮ್ಮ ಇಲಾಖೆಗೆ ಬರುವುದಿಲ್ಲ.

ಶ್ರೀ ಬಿ.ಶಿವರಾಮು: ಸಮಾಜ ಕಲ್ಯಾಣ ಇಲಾಖೆಯ ಸಚಿವರು ಇದ್ದಾರೆ, ಈ ಪ್ರಶ್ನೆಗೆ ಅವರು ಕಳೆದ ಸಾರಿ ಈ ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದರು. ಈ ಸಾರಿ ನಾನು ಅವರಿಗೆ ಕೇಳಿದ್ದೇನೆಂದು ಮೊದಲೇ ಹೇಳಿದ್ದೇನೆ. ಸಣ್ಣ ನೀರಾವರಿ ಇಲಾಖೆಗೆ ಈ ಪ್ರಶ್ನೆಯನ್ನು ಏತಕ್ಕಾಗಿ ವರ್ಗಾವಣೆ ಮಾಡಿದ್ದಾರೆ? ಹಣ ಒದಗಿಸಿಲ್ಲವೆಂದು ಸ್ಪಷ್ಟವಾಗಿ ಸಣ್ಣ ನೀರಾವರಿ ಇಲಾಖೆಯವರು ಹೇಳಿದ್ದಾರೆ. ಈ ಯೋಜನೆಗಳಿಗೆ ಏನಾದರೂ ಮುಕ್ತ ಬೇಕು. ಪೂರ್ಣಗೊಂಡಿರುವುದನ್ನು ನಿರ್ವಹಣೆ ಮಾಡುತ್ತಿಲ್ಲ. ನಿಗಮದಿಂದ ಹಣ ಒದಗಿಸಿಯಾದರೂ ಮಾಡಿಸುತ್ತೀರಾ ಅಥವಾ ಸಣ್ಣ ನೀರಾವರಿ ಇಲಾಖೆಗೆ 18 ಪರ್ಸೆಂಟ್ ಏನು ಹಣ ಕೊಟ್ಟಿದ್ದೀರಿ, ಅದರಲ್ಲಿ ಏನಾದರೂ ಮಾಡುತ್ತೀರಾ? ಇದಕ್ಕೆ ಏನಾದರೂ ಒಂದು ಪರಿಹಾರ ಸಿಗಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಗಂಗಾ ಕಲ್ಯಾಣ ಯೋಜನೆಗಳು ಜಿಲ್ಲಾ ಪಂಚಾಯಿತಿಯಿಂದ ಪ್ರಾರಂಭವಾದ ಯೋಜನೆಗಳು. ಆ ಜಿಲ್ಲಾ ಪಂಚಾಯಿತಿಯಲ್ಲಿ ಕೆಲಸವನ್ನು ಪ್ರಾರಂಭ ಮಾಡುವಾಗ ಪೂರ್ಣ ಹಣವನ್ನು ಇಟ್ಟುಕೊಂಡು ಅವರು ಪ್ರಾರಂಭ ಮಾಡಬೇಕಾಗಿತ್ತು. ಆ ಕೆಲಸ ಮಾಡಲಿಲ್ಲ. ಚೊತೆಗ ಜಿಲ್ಲಾ ಪಂಚಾಯತಿಯಲ್ಲಿ ಆಗತಕ್ಕಂತಹ ಗಂಗಾ ಕಲ್ಯಾಣ ಯೋಜನೆಯ ನಿರ್ವಹಣೆ ಮಾಡುವುದಕ್ಕೆ ಅವಕಾಶ ಇಟ್ಟುಕೊಂಡಿರಲಿಲ್ಲ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಇರತಕ್ಕಂಥ ನಿಗಮದಿಂದ ಮಾಡಿದರೆ ನಿರ್ವಹಣೆಗೂ ಅವಕಾಶ ಇರುತ್ತದೆ. ಈ ನಿರ್ವಹಣೆ ಮಾಡತಕ್ಕಂಥದ್ದು ನೀವು ಮಾಡಬೇಕೆಂದು ನಾನು ನಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನಕ್ಕೆ ತಂದಿದ್ದೇನೆ. ಇವುಗಳನ್ನು ಪೂರ್ಣ ಮಾಡುವುದಕ್ಕೆ ನಿಮ್ಮ ಹತ್ತಿರ ಇರುವ ವಿಶೇಷ ಘಟಕ ಯೋಜನೆ ಬಳಸಿಕೊಂಡು ಮಾಡಿ ಎಂದು ಹೇಳಿದ್ದೇನೆ. ಇಲ್ಲಿ ತಾಂತ್ರಿಕ ತೊಂದರೆ ಇದೆ. ಅವರು ತೆಗದುಕೊಂಡಿರುವ ಯೋಜನೆಗಳನ್ನು ನಾನು ಮಾಡುವುದಕ್ಕೆ ಬರುವುದಿಲ್ಲ. ಏನಾದರೂ ಮಾಡಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಶಿವರಾಮು: ಇದಕ್ಕೆ ಪರಿಹಾರ ಸಿಡಬೇಕೆಂದು ಮತ್ತೊಮ್ಮೆ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತಿದ್ದೇನೆ. ತಾವು ಈಗಾಗಲೇ ಅದಕ್ಕೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು ತರಿಸಿ ನನ್ನ ಚೊತೆ ಅಧಿಕಾರಿಗಳನ್ನು ಕೂರಿಸಿಕೊಂಡು ಚರ್ಚೆ ಮಾಡಿರುವುದು ಸರಿ. ಇಷ್ಟು ದಿವಸ ನಿರ್ವಹಣೆ ಮಾಡುವುದಕ್ಕೆ ಹಣ ಒದಗಿಸಿಲ್ಲವೆಂದು ಹೇಳಿದ್ದೀರಿ, ಯಾವಾಗ ಒದಗಿಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಿ. ಅಪೂರ್ಣಗೊಂಡಿರುವ ಯೋಜನೆಗೆ ಕೂಡ ಹಣವನ್ನು ಒದಗಿಸಿ ಈ ಎರಡು ಕಾರ್ಯಕ್ರಮಗಳನ್ನು ಪೂರ್ಣವಾಗಿ ಎಷ್ಟು ದಿವಸದಲ್ಲಿ ಮಾಡುತ್ತೀರಿ? ಹೋದ ಸಾರಿ ಕೂಡ ಸದನದಲ್ಲಿ ತಾವು ಆಶ್ವಾಸನೆ ಕೊಟ್ಟು ಅನುದಾನ ಕೊಡದೆ ಇರುವುದನ್ನು ಪರಿಗಣಿಸಿ,

ಈ ಯೋಜನೆಯನ್ನು ಇಷ್ಟು ದಿವಸದಲ್ಲಿ ಪೂರ್ಣ ಮಾಡುತ್ತೇವೆಂದು ಸ್ಪೆಸಿಫಿಕ್ಕಾಗಿ ಹೇಳಿ. ಪದೇ ಪದೇ ಪ್ರಶ್ನೆ ಕೇಳುವುದು ಉಚಿತ ಅಲ್ಲವೆಂದು ನಾನು ಭಾವಿಸಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ನನ್ನ ಇಲಾಖೆಗೆ ಇದು ಬರುವುದಿಲ್ಲ. ಆರ್‌ಡಿಪಿಆರ್ ಇಲಾಖೆಗೆ ಬರುವುದು. ಜಿಲ್ಲಾ ಪಂಚಾಯಿತಿಯವರು ಯಾವ ಗಂಗಾ ಕಲ್ಯಾಣ ಯೋಜನೆ ಪ್ರಾರಂಭ ಮಾಡಿದ್ದಾರೆ ಅದನ್ನು ಪೂರೈಸುವ ಜವಾಬ್ದಾರಿ ಅವರಿಗೆ ಇದೆ. ವಿಶೇಷ ಘಟಕ ಯೋಜನೆ ಅವರಲ್ಲಿ ಇದೆ. ಸಣ್ಣ ನೀರಾವರಿಗೆ ಅದರಲ್ಲಿ ಹಣವನ್ನು ಇಟ್ಟುಕೊಂಡಿದ್ದೇವೆ, ಆ ಹಣವನ್ನು ಬಳಸಿಕೊಂಡು ಆ ಕೆಲಸ ಪೂರೈಸಬೇಕಾದ ಜವಾಬ್ದಾರಿ ಅವರಿಗೆ ಇದೆ. ಅವರ ಮೂಲಾಂತರ ಈ ಕೆಲಸವನ್ನು ನಾವು ಮಾಡಿಸಬೇಕಾಗುತ್ತದೆ. ಆ ಕೆಲಸವನ್ನು ಅವರು ಮಾಡದೇ ಇದ್ದರೆ ವಿಶೇಷ ಘಟಕ ಯೋಜನೆಯಲ್ಲಿ ಬಳಸಿಕೊಳ್ಳಲಿ ಎಂದು ನಾನು ಆದೇಶ ಕೊಡುತ್ತೇನೆ.

ಗಂಗಾ ಕಲ್ಯಾಣ ಯೋಜನೆಯಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳಿಗೆ ಕೊಳವೆ ಬಾವಿ ನಿರ್ಮಾಣ.

218(2565)

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಸಮಾಜ ಕಲ್ಯಾಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗಂಗಾ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದವರಿಗೆ ಎಷ್ಟು ಕೊಳವೆ ಬಾವಿ ಯೋಜನೆಗಳನ್ನು 2000-2001ನೇ ಸಾಲಿನಲ್ಲಿ ಮಂಜೂರಾತಿ ಮಾಡಿದೆ; ಮತ್ತು ಇದಕ್ಕೆ ಖರ್ಚಾಗಿರುವ ಹಣ ಎಷ್ಟು?

ಆ) 2001-2002ನೇ ಸಾಲಿನಲ್ಲಿ ಎಷ್ಟು ಫಲಾನುಭವಿಗಳಿಗೆ ಈ ಯೋಜನೆಯನ್ನು ಮಂಜೂರು ಮಾಡಲಾಗುವುದು, ಇದಕ್ಕಾಗಿ ಸರ್ಕಾರ ಇಟ್ಟಿರುವ ಹಣವೆಷ್ಟು? ಜಿಲ್ಲಾವಾರು ಮಾಹಿತಿಯನ್ನು ನೀಡುವುದು;

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ 2000-2001ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಹಾಗೂ ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಯಡಿ ಈ ಕೆಳಗೆ ತಿಳಿಸಿರುವಂತೆ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.